1985ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ಮಸೂದೆ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,...

ಶ್ರೀ ಎಸ್. ಬಂಗಾರಪ್ಪ—ಮಾನ್ಯ ಅಧ್ಯಕ್ಷರೇ ಇವೊತ್ತು ಬೇರೆ ಬೇರೆ ಕೆಲಸಗಳು ಇವೆ, ನಾಳೆ ಇದನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಈಗ ಗೃಹ ಮಂತ್ರಿಗಳು ಮಾನ್ಯ ಸದಸ್ಯರಾದ ಶ್ರೀ ವಸಂತ್ ಬಂಗೇರಾ ಅವರು ಈ ದಿನ ಬೆಳಗ್ಗೆ ೩ಗಳನೇ ನಯಮದ ಮೇರೆಗೆ ತಂದಿದ್ದ ವಿಷಯಕ್ಕೆ ಉತ್ತರವನ್ನು ನೀಡುತ್ತಾರೆ.

ಮಂತ್ರಿಯವರಿಂದ ಹೇಳಿಕೆ

ಶಿಕಾರಿಪುರ ತಾಲ್ಲೂಕಿನ ಈ ಸೂರು ಗ್ರಾಮದಲ್ಲಿ ಬಡ ಹೆಣ್ಣು ಮಕ್ಕಳಿಗೆ ಕೊಡಂತ್ತಿರುವ ಚಿತ್ರಹಿಂಸೆ

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು, ಈಸೂರು ಗ್ರಾಮದಲ್ಲಿ ಬಡ ಹೆಣ್ಣುಮಕ್ಕಳಿಗೆ ಹಿಂಸೆ ನೀಡುತ್ತಿರುವ ಬಗ್ಗೆ ಅಲ್ಲಿಯ ಜನಗಳಿಗೆ ಆತಂಕವಾಗಿದೆ ಎಂದು ಮಾನ್ಯ ಸದಸ್ಯರಾದ ವಸಂತ್ ಬಂಗೇರಾ ಅವರು ಈ ದಿನ ಬೆಳಗ್ಗೆ ೩ಳಳನೇ ನಿಯಮದ ಮೇರೆಗೆ ನನ್ನ ಗಮನ ಸೆಳೆದಿದ್ದರು. ಅವರ ಬಗ್ಗೆ ಈ ಹೇಳಿಕೆಯನ್ನು ಕೊಡುತ್ತೇನೆ.

ಈಸೂರು ಗ್ರಾಮ ಶಿಕಾರಿಪುರದ ಆರಕ್ಷಕ ಠಾಣೆಯ ವ್ಯಾಪ್ತಿಗೆ ಬರುತ್ತದೆ. ಗ್ರಾಮದಲ್ಲಿ ಬನಶಂಕರಿ ದೇವಸ್ಥಾನ ಇದೆ. ದೇವಾಂಗ ಮತಸ್ಥರೆಲ್ಲರೂ ಈ ದೇವಸ್ಥಾನದ ಭಕ್ತರು, ದೇವಸ್ಥಾನಕ್ಕೆ ಸೇರಿದ ಈಸೂರು ಗ್ರಾಮದ ಸರ್ವೆ ನಂಬರ್ ೨೬೮ (೧)ರಲ್ಲಿ ೧ ಎಕರೆ ೨೭ ಗುಂಟೆ ಜಮೀನನ್ನು ಚರ್ಚ್ ಗುಂಡಿ ಗ್ರಾಮದ ಸರ್ವೆನಂಬರ್ ೮೩೧(ಎ)ನಲ್ಲಿ ಒಂದು ಎಕರೆ ಹತ್ತುಗುಂಟೆ ಜಮೀನನ್ನು ದೇವೇಂದ್ರಪ್ಪ ಎಂಬಾತನು ವ್ಯವಸಾಯ ಮಾಡುತ್ತಿದ್ದನು. ಈ ವರ್ಷ ಆರ್.ಬಿ.ಸಿ.ನಲ್ಲಿ ಹುಚ್ಚನಾರಾಯಣಪ್ಪನ ಮಗ ಷಡಾಕ್ಷರಪ್ಪ ಮೇಲ್ಕಂಡ ಸರ್ವೆ ನಂ. ೨೬೮ (ಎ) ಜಮೀನನ್ನು ವ್ಯವಸಾಯ ಮಾಡುತ್ತಿರುವುದಾಗಿಯೂ ನಮೂದಿಸಲಾಗಿದೆ. ಷಡಾಕ್ಷರಪ್ಪ ಎಂಬ ಈ ಇಬ್ಬರು ವ್ಯವಸಾಯಗಾರರು ಬೇರೆ ಬೇರೆಯವರು. ಹುಚ್ಚನಾರಾಯಣಪ್ಪನ ಮಗ ಷಡಾಕ್ಷರಪ್ಪ ಇವರು ಸಾಗರದ ಕಂದಾಯ ಉಪವಿಭಾಗಾಧಿಕಾರಿಗಳ ಮುಂದೆ ಒಂದು ಅರ್ಜಿಯನ್ನು ಸಲ್ಲಿಸಿ ಅವರು ವ್ಯವಸಾಯ ಮಾಡುತ್ತಿದ್ದ ಷಡಾಕ್ಷರಪ್ಪ ಎಂಬಾತನ ಮೇಲೆ ಸರ್ವೆ ನಂಬರ್ ೨೬೮ (೧) ಇದರ ಮೇಲೆ ತಡೆಯಾಜ್ಞೆಯನ್ನು ಪಡೆದುಕೊಂಡಿದ್ದಾರೆ ಈ ಕೇಸು ೨೯-೮೫ ರಂದು ವಿಚಾರಣೆಗೆ ಬಂದಿದೆ.

ಇಬ್ಬರೂ ಕಂದಾಯ ಉಪವಿಭಾಗಾಧಿಕಾರಿಗಳ ಮುಂದೆ ವಿವಾದವನ್ನು ಇತ್ಯರ್ಥ ಮಾಡಿಕೊಳ್ಳುವುದಾಗಿಯೂ, ಸಮಸ್ಯೆ ಬಗೆಹರಿಯುವವರೆಗೆ ತಾವು ಜಮೀನು ಪ್ರವೇಶಿಸುವುದಿಲ್ಲವೆಂದೂ ಒಪ್ಪಿಕೊಂಡಿದ್ದಾರೆ. ಈ ಒಂದು ಪ್ರಕರಣದ ವಿನಹ ಈಸೂರು ಗ್ರಾಮದಲ್ಲಿ ಬೇರೆ ಯಾವ ಘಟನೆಗಳೂ ನಡೆದಿಲ್ಲವೆಂದೂ, ಅಲ್ಲಿಯ ಬಡ ಹೆಂಗಸರಿಗಾಗಲೀ ಮತ್ತಾರಿಗೂ ಯಾವ ರೀತಿಯ ಹಿಂಸೆ ಅಥವಾ ಆತಂಕ ಇಲ್ಲವೆಂದು ವರದಿಯಾಗಿದೆ.

1985ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ಮಸೂದೆ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೫೫ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ ತಿದ್ದುಪಡಿ ವಿಧೇಯಕವನ್ನು...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು.—ಸ್ವಲ್ಪ, ಅವರು ವಿಧೇಯಕವನ್ನು ಮಂಡಿಸಲಿ, ಓಂ ನಮಃ ಶಿವಾಯ ಎಂದು ಶುರು ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸಹಕಾರ ಕೊಡುವುದಕ್ಕೇ ನಾವು ಇಲ್ಲಿ ಇದ್ದೇವೆ. ಒಳ್ಳೆಯದಕ್ಕೆ ಸಹಕಾರ ಕೊಡುತ್ತೇವೆ. ಮಂಡನೆ ಮಾಡುವುದಕ್ಕೆ ಕೆಲವು ಅಬ್ಜೆಕ್ಷನ್ಸ್ ಇದೆ. ಅದಕ್ಕೋಸ್ಕರ ನಾನು ಹೇಳಿದ್ದು ಇದಕ್ಕೆ ಕೆಲವು ಅಬ್ಜೆಕ್ಷನ್ಸ್ ಇದೆ. ಅದಕ್ಕೋಸ್ಕರ ನಾಳೆ ಇದನ್ನು ಹಾಕಿಕೊಳ್ಳೋಣ ಎಂದು ಹೇಳಿದ್ದು.

ಅಧ್ಯಕ್ಷರು.—ಮಂಡನೆ ಮಾಡಲಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ,

"೧೯೮೫ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.

* "೧೯೮೫ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದಂ."

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮಂತ್ರಿ ಮಂಡನೆಗೆ ಅನುಮತಿ ನೀಡಲಾಯಿತು.

ಶ್ರೀ ಆರ್.ಎಲ್. ಜಾಲಪ್ಪ.—ನಾನು ೧೯೮೫ನೇ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು.—ಮಸೂದೆಯನ್ನು ಮಂಡಿಸಲಾಗಿದೆ.

ಶ್ರೀ ಆರ್.ಎಲ್ ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸುಮಾರು ೮೧೦೦ ಜನ ಲೇವಾದೇವಿಗಾರರು ಇದ್ದಾರೆ. ತಮಗೆ ಗೊತ್ತಿರುವ ಹಾಗೆ ಇವರ ಬಳಿ ಹೋಗಿ ಲೇವಾದೇವಿ ಮಾಡುವವರು ಬಹಳ ಬಡವರು ರೈತರು ಹಾಗೂ ಕಾರ್ಮಿಕರು ಆಗಿದ್ದಾರೆ. ಅದರಲ್ಲೂ ಸ್ಟ್ರೈಕ್ ಮೂದಲಾದವುಗಳು ಆದಾಗ ಅವರು ತಮ್ಮಲ್ಲಿರುವ ಪಾತ್ರೆಪದಾರ್ಥಗಳನ್ನು ತೆಗೆದು ಕೊಂಡು ಹೋಗಿ ಒತ್ತೆ ಇಡತಕ್ಕ ಪ್ರಸಂಗ ಇದೆ. ಈ ಲೇವಾದೇವಿಗಾರರ ಮೇಲೆ ಬಹಳಷ್ಟು ದೂರುಗಳು ನಮಗೆ ಬರುತ್ತಿವೆ ಇವರು ೨೧ ಪರ್ಸೆಂಟ್ ಬಡ್ಡಿ ತೆಗೆದುಕೊಳ್ಳುತ್ತೇವೆಂದು ಹೇಳಿ ೨೬ ರಿಂದ ೨೫ರ ವರೆಗೆ ಪಡೆದುಕೊಳ್ಳುತ್ತಿದ್ದಾರೆ. ಕೊಡುವಾಗಲೇ ಬಡ್ಡಿ ಮುರಿದುಕೊಂಡು ಅಸಲನ್ನೂ ಕೊಡುತ್ತಾರೆ. ಇವೆಲ್ಲಾ ದೂರುಗಳು ನಮಗೆ ಬಂದಿವೆ. ಬಡವರ ಹಿತದೃಷ್ಟಿಯನ್ನು ಕಾಪಾಡಬೇಕೆಂದು ಹೇಳಿ ಈ ಮಸೂದೆಯನ್ನು ತಂದಿದ್ದೇವೆ. ದಯವಾಡಿ ಈ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇವತ್ತು ನಾಳೆ ಇದನ್ನು ಮುಂಗಿಸಬೇಕೆಂದು ಆಗಿದೆ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು ನಾಳೆ ಎಲ್ಲಾ ತೆಗೆದುಕೊಳ್ಳಿ.

ಅಧ್ಯಕ್ಷರು —ಆದಷ್ಟು ನಾಳೆ ಮುಂಗಿಸೋಣ, ನೀವು ಸಹಕಾರ ನಾಳೆ ಕೊಡುತ್ತೀರಿ ಅಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ಸಹಕಾರ ಕೊಡಲಿಲ್ಲ ಎಂಬ ಒಂದು ದಿವಸ ತೋರಿಸಿ.

ಅಧ್ಯಕ್ಷರು.—ಸಭೆಯನ್ನು ನಾಳೆ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

ಸಭೆಯು ೫ ಗಂಟೆ ೧೦ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೧ನೇ ಆಗಸ್ಟ್ ೧೯೮೫ ರಂದು ಗುರುವಾರ ದಿವಸ ಬೆಳಿಗ್ಗೆ ೧೧-೦೦ ಗಂಟೆಗೆ ಸೇರಲು ನಿಶ್ಚಯಿಸಿತು.